ಭಾವನೆಗಳನ್ನು ಸಂತೈಸಬೇಕು ಅನಿಸಿತು. ಆದರೆ ಅದು ಈಗ ಸಾಧ್ಯವಿಲ್ಲದ ಮಾತೂ ಎನ್ನುವುದು ಅವನಿಗೆ ಗೊತ್ತಿತ್ತು. ಕನಿಷ್ಠ ಸಂದೇಶದ ಮೂಲಕವಾದರೂ ಅವಳಿಗೆ ಒಂದೆರಡು ಒಳ್ಳೆಯ ಮಾತುಗಳನ್ನು ಹೇಳಬೇಕು ಎನ್ನುವ ಭಾವ ತೀವ್ರವಾಯಿತು. ಕಿರಿಯ ರಾಣಿಯ ಪ್ರೇಮ ಸಂದೇಶವನ್ನು ಕೊನೆಯಲ್ಲಿ ತಿದ್ದಿ ತನ್ನ ಹೆಸರು ಬರೆದು ಆಪ್ತ ಸೇವಕ ವೀರಬಾಹುವಿಗೆ ಅದನ್ನು ಗುಟ್ಟಾಗಿ ಮಾಲವಿಕೆಗೆ ತಲುಪಿಸುವಂತೆ ಮಾಡಿದನು.

★★★

ಇತ್ತ ಗೆಳೆಯನ ಪ್ರೇಮವನ್ನು ಪಡೆಯಲಾಗದೇ ಪತಿಯ ಪ್ರೀತಿಯನ್ನೂ ಗಳಿಸಲಾಗದೇ ಮಾಲವಿಕಾ ವಿರಕ್ತಭಾವದಲ್ಲಿದ್ದಳು. ಸೇನಾಪತಿ ಉಡುಗೊರೆಯಾಗಿ ಕಳುಹಿಸಿದ ಬೆಚ್ಚನೆಯ ಕಾವ್ಯದ ಸಾಲುಗಳಿಂದ ಅವಳಲ್ಲಿ ಮತ್ತೆ ಜೀವನಪ್ರೀತಿ ಜಿನುಗತೊಡಗೊತು. ಮಾಲವಿಕೆಯ ಪತಿ ಸಿರಿವಂತನು ಚೆಲುವೆ ಮತ್ತು ಗುಣಶೀಲೆಯಾದ ಪತ್ನಿಯಿದ್ದರೂ ನಗರದ ಪ್ರಸಿದ್ಧ ವೇಶ್ಯೆ ವಸಂತಸೇನೆಯ ಆಕರ್ಷಣೆಗೆ ಬಿದ್ದಿದ್ದನು. ಅವಳ ಮೋಹಕ್ಕೆ ಒಳಗಾದ ಸಿರಿವಂತನು ಮಾಲವಿಕಾಳನ್ನು ಪ್ರೀತಿಯಿಂದ ನೋಡಿಕೊಳ್ಳದಿದ್ದರೆ ಅದು ಹೇಗೋ ನಡೆದುಹೋಗುತ್ತಿತ್ತೇನೋ. ಆದರೆ ಮನೆತನದ ಆಸ್ತಿಯನ್ನು ಚೂರು ಚೂರೇ ವಸಂತಸೇನೆಯ ಖಾತೆಗೆ ಹೋಗುವಂತೆ ಮಾಡುತ್ತಿರುವುದು ಮಾಲವಿಕಾಳಿಗೂ ಅವಳ ಮನೆಯ ಹಿರಿಯರಿಗೂ ಚಿಂತೆಯ ವಿಷಯವಾಗಿತ್ತು. ಸಿರಿವಂತನು ಅಲ್ಲಿಗೆ ಹೋಗುವುದನ್ನು ತಪ್ಪಿಸಲು ಶತಪ್ರಯತ್ನ ಮಾಡಿದರೂ ಅದು ಸಾಧ್ಯವಾಗಲಿಲ್ಲ. ವ್ಯವಹಾರದಲ್ಲಿ ಈ ಪ್ರೀತಿಪ್ರೇಮದ ಕಾವ್ಯದ ಹುಚ್ಚು ಸಲ್ಲ ಎಂದು ಸಿರಿವಂತನ ಮುದಿ ತಂದೆ ಎಚ್ಚರಿಸುತ್ತಿದ್ದದನ್ನು ಸಿರಿವಂತ ಗಣನೆಗೆ ತೆಗೆದುಕೊಳ್ಳಲಿಲ್ಲ. ಇಂಥ ಸಂದಿಗ್ಧ ಸನ್ನಿವೇಶದಲ್ಲಿ ಮಾಲವಿಕೆಗೆ ಸೇನಾಪತಿಯ ಕಾವ್ಯಮಯ ಸಂದೇಶಗಳು ಕಪ್ಪು ಮೋಡದ ನಡುವಿಂದ ಝಗ್ಗನೇ ಬೆಳಗಿದ ಮಿಂಚುಗಳಂತೆ ಕಂಡವು. ಒಂದು ರಾತ್ರಿ ವಸಂತಸೇನೆಯ ಶಯ್ಯಾಗಾರಕ್ಕೆ ಹೊರಟಿದ್ದ ಪತಿಯನ್ನು ತಡೆದು, ''ನಿಮಗೆ ಕಾವ್ಯ ವಾಚನ ಕೇಳಬೇಕಲ್ಲವೆ? ಇಂದು ರಾತ್ರಿ ನಂಜೊತೆ ಇರಿ. ಕಾವ್ಯದ ರಸದೌತಣ ಮಾಡಿಸುತ್ತೇನೆ. ಜಗತ್ತಿನ ಪ್ರೇಮವನೆಲ್ಲ ಅಕ್ಷರಕ್ಕಿಳಿಸಿ ನಿಮ್ಮೆದುರು ಪ್ರಸ್ತುತ ಪಡಿಸುತ್ತೇನೆ'' ಎಂದು ಆ ರಾತ್ರಿ ಹೇಗೋ ಅವನನ್ನು ತಡೆದಳು. ಸಿರಿವಂತನು ಮಧುಬಟ್ಟಲನ್ನು ತುಟಿಗಿಡುತ್ತಾ ಸುಖಾಸೀನನಾದ ಮೇಲೆ ಸೇನಾಪತಿಯ ಹೆಸರಿದ್ದಲ್ಲಿ 'ನಿಮ್ಮ ಮಾಲವಿಕೆ' ಎಂದು ತಿದ್ದಿದ ಕಾವ್ಯವನ್ನು ಭಾವಪೂರ್ಣವಾಗಿ ಓದಿದಳು. ಸೇನಾಪತಿಯಾಗುವ ಮೊದಲಿನ ವೃಷಸೇನನ್ನು ಹೃದಯಾಳದಿಂದ ಆರಾಧಿಸುತ್ತಿದ್ದ ಕಾವ್ಯಘಟ್ಟವು ಅವಳ ಭಾವಕೋಶದಲ್ಲಿನ್ನೂ ಬೆಚ್ಚಗಿದ್ದುದರಿಂದ ಮೈಮರೆತು ಕಾವ್ಯವಾಚನಗೈದಳು. ಆಹಾ! ಅದ್ಭುತ ಕಾವ್ಯ! ಪತ್ನಿಯ ಹೃದಯದಲ್ಲಿ ಅವಿತಿದ್ದ ಪ್ರೇಮವು ಕಣ್ಣುಗಳಲ್ಲಿ ದ್ರವಿಸಿರುವುದನ್ನು ಮೊದಲಬಾರಿಗೆ ಕಂಡ ಸಿರಿವಂತನು ಅಚ್ಚರಿಗೊಂಡು ಒಲುಮೆಯಿಂದ ಅವಳನ್ನು ತಬ್ಬಿಕೊಂಡನು. ಒಂದು ಸಣ್ಣ ನಶೆಗೊಳಗಾದವಳಂತೆ ಮಾಲವಿಕೆಯೂ ಸಿರಿವಂತನ ಎದೆ ಮೇಲೆ ಒರಗಿದಳು. ಆ ಆಲಿಂಗನದಲ್ಲಿ ನಿದ್ದೆಹೋದ ಮಾಲವಿಕೆಯನ್ನು ಮೆಲ್ಲನೆ ತಲೆದಿಂಬಿಗೊರಗಿಸಿ ಸಿರಿವಂತನು ಅವಳ ಕೋಮಲ ಬೆರಳುಗಳಿಂದ ಕಾವ್ಯಸಂದೇಶವನ್ನು ಬಿಡಿಸಿಕೊಂಡು ವಾಸವದತ್ತೆಯ ಮನೆ ಕಡೆಗೆ ಕುದುರೆಯೇರಿ ನಡೆದನು. ಪ್ರಸಿದ್ಧ ವೇಶ್ಯೆಯಾದ ವಸಂತಸೇನೆಯ ಮನಸನ್ನು ಗೆಲ್ಲುವ ಹುಮ್ಮಸ್ಸಿನೊಂದಿಗೆ ಕುದುರೆಯನ್ನು ನಾಗಾಲೋಟದಿಂದ ಓಡಿಸಿದನು. ಆ ಅಪೂರ್ವ ಸುಂದರಿ ಸಿರಿವಂತನಿಗೆ ತನ್ನ ಸುಂದರ ದೇಹವನ್ನು ಅರ್ಪಿಸಿದರೂ ಅವಳ ಮನಸ್ಸನ್ನು ಗೆಲ್ಲಲಾಗದ ನೋವು